ರಾಜ್ಯದ ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಿಗೆ ವಿದ್ಯುತ್ ಕಡಿತ ಕುರಿತು

172 (1597) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ದಿನದ ಎಷ್ಟು ಗಂಟೆಗಳ ಕಾಲ ಪವರ್‌ಕಟ್ ನಿಗಧಿಪಡಿಸಿದೆ; ಹಾಗೂ ನಿಗದಿತ ಪವರ್‌ಕಟ್ ಅವಧಿಗಿಂತ ಹೆಚ್ಚು ಕಾಲಾವಧಿಗೆ ವಿದ್ಯುತ್ ಸೌಲಭ್ಯ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗ್ರಾಮೀಣ ಭಾಗದ ರೈತರ ಹಾಗೂ ಕೂಲಿಕಾರರ ಮಕ್ಕಳ ವಾರ್ಷಿಕ ಪರೀಕ್ಷೆಯ ಸಿದ್ಧತೆಗೆ ಪವರ್ ಕಟ್ ನೀತಿಯಿಂದಾಗಿ ತೊಂದರೆಯಾಗಲಾರದೇ;

ಇ) ವಿದ್ಯುತ್ ಪ್ರಸರಣಾ ನಿಗಮವು ಖಾಸಗೀಕರಣಗೊಂಡ ನಂತರದ ಕಾಲಾವಧಿಯಲ್ಲಿ ಸರ್ಕಾರಕ್ಕೆ ಉಳಿತಾಯವಾದ ವಾರ್ಷಿಕವಾರು ನಷ್ಟ ಎಷ್ಟು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ವಿದ್ಯುತ್ ಲಭ್ಯತೆ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ನೀಡಿರುವ ನಿರ್ದೇಶನಗಳು ಮತ್ತು ಸರ್ಕಾರದ ಸಹಾಯಧನ ಇವೆಲ್ಲವನ್ನು ಪರಿಗಣಿಸಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ದಿನವಹಿ 85 ದಶಲಕ್ಷ ಯೂನಿಟ್ಟುಗಳ ವಿದ್ಯುತ್ ಸರಬರಾಜನ್ನು ಮಾಡುವ ತೀರ್ಮಾನಕ್ಕೆ ಬಂದಿತು. ಈ ದಿನವಹಿ ವಿದ್ಯುತ್ ಬಳಕೆಗೆ ಹಂಚಿಕೆಯನ್ನು ನಿಗದಿಪಡಿಸುವಾಗ ಹಿಂದಿನ ಸ್ಟೇಷನ್‌ವಾರು ವಿದ್ಯುತ್ ಬಳಕೆಯ ಮಾಹಿತಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಬೆಂಗಳೂರು ನಗರ ಹೊರತುಪಡಿಸಿ ಪಟ್ಟಣ ಪ್ರದೇಶಗಳಲ್ಲಿ ಎರಡು ಗಂಟೆಗಳ ಕಾಲ ಲೋಡ್ ಶೆಡ್ಡಿಂಗ್ ಮಾಡಲು ನಿರ್ದೇಶಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ ಸರಾಸರಿ 8 $^{1}/_{2}$ ಗಂಟೆಗಳು ಸಿಂಗಲ್ ಫೇಸ್‌ನಲ್ಲಿ ಮತ್ತು ದಿನವಹಿ ಸರಾಸರಿ 6 $^{1}/_{2}$ ಗಂಟೆಗಳ ಅವಧಿಯಲ್ಲಿ 3 ಫೇಸ್‌ನಲ್ಲಿ ವಿದ್ಯುತ್ ಸರಬರಾಜನ್ನು ಮಾಡಲು ಸಾಧ್ಯವಾಗುತ್ತದೆ ಎಂಬುದು ಕಂಡುಬಂದಿತು. ಆ ಪ್ರಕಾರ ವಿದ್ಯುತ್ ಸರಬರಾಜಿನ ವ್ಯವಸ್ಥೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಜಾರಿಗೊಳಿಸಲಾಯಿತು. ಅದಾಗ್ಯೂ, ವಿದ್ಯುತ್ ಸಬ್ ಸ್ಟೇಷನ್‌ಗಳಿಂದ ಸರಬರಾಜನ್ನು ಆಯಾ ಸಬ್ ಸ್ಟೇಷನ್ನುಗಳಿಗೆ ನಿಗದಿಪಡಿಸಲಾಗಿರುವ ವಿದ್ಯುತ್ತಿನ ಹಂಚಿಕೆಗೆ ಸೀಮಿತಗೊಳಿಸಬೇಕಾಗಿರುತ್ತದೆ. ಕೆಲವು ಸಬ್ ಸ್ಟೇಷನ್ನುಗಳನ್ನು ಬಿಟ್ಟು ಉಳಿದಂತೆ ಈ ವ್ಯವಸ್ಥೆಯು ಚೆನ್ನಾಗಿ ನಿರ್ವಹಣೆಗೊಳ್ಳುತ್ತಿರುವುದು ಅನುಭವಕ್ಕೆ ಬಂದಿರುತ್ತದೆ. ಕೆಲವು ಸಬ್ ಸ್ಟೇಷನ್ನುಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಫೀಡರ್‌ಗಳ ಓವರ್‌ಲೋಡ್ ಆಗುವಿಕೆ ಇತ್ಯಾದಿ ಕಾರಣಗಳಿಂದಾಗಿ, ಮೇಲ್ಕಂಡ ರೀತಿಯಲ್ಲಿ ವಿದ್ಯುತ್ ಸರಬರಾಜಿನ ವ್ಯವಸ್ಥೆಯನ್ನು ಜಾರಿಗೊಳಿಸಲು ಸಾಧ್ಯವಾಗುತ್ತಿಲ್ಲ. ಫೆಬ್ರವರಿ ಮಧ್ಯ ಭಾಗದ ನಂತರ ಹಾಗೂ ಮಾರ್ಚ್ ತಿಂಗಳುಗಳಲ್ಲಿ ಗ್ರಾಮಾಂತರ ಮತ್ತು ನಗರ ಪ್ರದೇಶಗಳೆರಡರಲ್ಲೂ ವಿದ್ಯುತ್ ಬೇಡಿಕೆಯು ಹೆಚ್ಚಳಗೊಳ್ಳುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಅಲ್ಲದೇ, ವಿಶ್ವಕಪ್ ಕ್ರಿಕೆಟ್ ಪಂದ್ಯಗಳ ವೀಕ್ಷಿಸುವಿಕೆಯೂ ಸಹಾ ವಿದ್ಯುತ್ ಬಳಕೆಯ ಹೆಚ್ಚಳಕ್ಕೆ ಒಂದು ಮುಖ್ಯ ಕಾರಣವಾಗಿದೆ. ವಿದ್ಯುತ್ ಲಭ್ಯತೆ ಮತ್ತು ಬೇಡಿಕೆಯನ್ನು ಪರಿಗಣಿಸಿ, ದಿನವಹಿ 85 ದಶಲಕ್ಷ ಯೂನಿಟ್ಟುಗಳ ವಿದ್ಯುತ್ ಪೂರೈಕೆಯನ್ನು 88 ದಶಲಕ್ಷ ಯೂನಿಟ್ಸ್‌ಗಳಿಗೆ ಹೆಚ್ಚಳಗೊಳಿಸಲು ತೀರ್ಮಾನಿಸಲಾಗಿದ್ದು, ಈ

ಪೂರೈಕೆಯನ್ನು ದಿನಾಂಕ: 22-02-2003 ರಿಂದ ಮಾಡಲಾಗುತ್ತಿದೆ. ಕೆಲವು ಸಬ್ ಸ್ಟೇಷನ್‌ಗಳಲ್ಲಿ ವ್ಯವಸ್ಥೆಯ ಇತಿಮಿತಿಗಳಿಂದಾಗಿ ಆಶ್ವಾಸಿಸಲಾದ ಕಾಲಾವಧಿಗೆ ತಕ್ಕಂತೆ ವಿದ್ಯುತ್ ಸರಬರಾಜನ್ನು ಮಾಡದಿರುವ ಸಂಭವಗಳು ಇರುತ್ತವೆ. ಆದಾಗ್ಯೂ ಈ ವ್ಯವಸ್ಥೆಯು ಒಟ್ಟಾರೆ ಉತ್ತಮ ರೀತಿಯಲ್ಲಿ ನಿರ್ವಹಣೆಗೊಳ್ಳುತ್ತಿದೆ.

ಆ) ಗ್ರಾಮಾಂತರ ಪ್ರದೇಶಗಳಲ್ಲಿ ಸಿಂಗಲ್ ಫೇಸ್‌ನಲ್ಲಿ ದಿನಮಹಿ ಸರಾಸರಿ 8 $^{1}/_{2}$ ಗಂಟೆಗಳ ಅವಧಿಯ ವಿದ್ಯುತ್ ಸರಬರಾಜನ್ನು ವ್ಯವಸ್ಥೆಗೊಳಿಸಲಾಗುತ್ತಿದೆ. ಇದರಲ್ಲಿ ರಾತ್ರಿ ವೇಳೆಯಾದ 6 ರಿಂದ 10 ಗಂಟೆಯ ಅವಧಿಯೂ ಸಹಾ ಸೇರಿರುತ್ತದೆ. ವಿದ್ಯುತ್ ಸರಬರಾಜಿನ ರಾತ್ರಿ ವೇಳೆಯ ಈ ಕಾಲಾವಧಿಯನ್ನು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ರಾತ್ರಿ ವೇಳೆಯಲ್ಲಿ ತಮ್ಮ ವ್ಯಾಸಂಗವನ್ನು ಸುಗಮವಾಗಿ ನಿರ್ವಹಿಸಲು ನುಕೂಲವಾಗುವಂತೆ ನಿಗದಿಪಡಿಸಲಾಗಿರುತ್ತದೆ.

ಇ) ವಿದ್ಯುತ್ ಪ್ರಸರಣ ನಿಗಮವು ಖಾಸಗೀಕರಣಗೊಂಡಿರುವುದಿಲ್ಲ. ಪ್ರಸರಣೆ ಮತ್ತು ವಿತರಣೆ ಚಟುವಟಿಕೆಗಳನ್ನು ಮಾತ್ರ ಬೇರ್ಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಮಾನ್ಯ ಅಧ್ಯಕ್ಷರೆ, ರಾಜ್ಯದ ಗ್ರಾಮಾಂತರ ಪಟ್ಟಣ ಪ್ರದೇಶಗಳಲ್ಲಿ ಎಷ್ಟು ಗಂಟೆಗಳ ಕಾಲ ವಿದ್ಯುತ್ ಕಟ್‌ನ್ನು ನಿಗದಿಪಡಿಸಲಾಗಿದೆ ಶ್ರೀ ಎಂಬ ಪ್ರಶ್ನೆಗೆ, ವಿದ್ಯುತ್ ಪ್ರಸರಣ ನಿಗಮವು ದಿನವಹೀ 85 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಸರಬರಾಜನ್ನು ಮಾಡುವ ತೀರ್ಮಾನಕ್ಕೆ ಬಂದಿತೆಂದು ಉತ್ತರದಲ್ಲಿ ನೀಡಿದ್ದಾರೆ. ಅಂದರೆ ಆ ಪ್ರಸರಣ ನಿಗಮ ಏನು ಮಾಡಿದೆ ಎಂದರೆ ಅಲ್ಲಿ ಎಷ್ಟು ಕನ್‌ಸ್ಯೂಮ್ ಆಗುತ್ತದೆ, ಎಷ್ಟು ಬೋರ್‌ವೆಲ್ಸ್ ಇದೆ, ಎಷ್ಟು ಬೇರೆ ಕೈಗಾರಿಕೆಗಳು ಇದೆ ಎಂಬ ಬಗ್ಗೆ ಯೋಚನೆ ಮಾಡಿಲ್ಲ. 85 ಲಕ್ಷ ಯೂನಿಟ್‌ನ್ನು ನಿಗದಿ ಮಾಡಿದ್ದಾರೆ. ಆ 85 ಲಕ್ಷ ಯೂನಿಟ್ ಮಾಡಿದರೆ ಏನಾಗುತ್ತದೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ವಿಧಾನಸಭೆಯಲ್ಲಿ ಮತ್ತು ಪತ್ರಿಕಾ ಹೇಳಿಕೆಯಲ್ಲೇನು ಎಂಟು ಗಂಟೆ ವಿದ್ಯುತ್ ಎಂದು ಹೇಳಿದ್ದಾರೆ ಅಷ್ಟು ವಿದ್ಯುತ್‌ನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಸಿಂಗಲ್ ಲೈನ್ ಆಯಿತು ಎಂದರೆ, ಊಟ ಮಾಡಬೇಕಾದರೆ ಇನ್ನೊಂದು ದೀಪವನ್ನು ಹಚ್ಚಿಕೊಂಡು ಊಟ ಮಾಡಬೇಕು. ಅನ್ನ ಯಾವುದು, ಸಾಂಬರ್ ಯಾವುದು ಎಂಬುದೇ ಗೊತ್ತಾಗುವುದಿಲ್ಲ. ಇದರ ಜೊತೆಗೆ ಕೇಳಿರುವ ಇನ್ನುಳಿದ ಪ್ರಶ್ನೆಗಳಿಗೆ ತಪ್ಪು ತಪ್ಪು ಮಾಹಿತಿಗಳನ್ನು ನೀಡಿದ್ದಾರೆ. ಸರಿಯಾದ ಮಾಹಿತಿಯನ್ನು ನೀಡಲು ಸಾಧ್ಯವಾಗಿಲ್ಲ. ಸ್ಟೇಷನ್‌ವಾರು ವಿದ್ಯುತ್ ಬಳಕೆಯ ಮಾಹಿತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ನಮ್ಮಲ್ಲಿ ಐದು ಸ್ಟೇಷನ್ ಇದೆ. ಯಾವ ಯಾವ ಸ್ಟೇಷನ್‌ಗೆ ಎಷ್ಟೆಷ್ಟು ವಿದ್ಯುತ್‌ನ್ನು ಅಲಾಟ್ ಮಾಡಿದ್ದಾರೆ ಎಂಬುದನ್ನು ಮಾನ್ಯ ಸಚಿವರು ಹೇಳಿಲ್ಲ. ಎರಡನೆ ಪ್ರಶ್ನೆಯಲ್ಲಿ, ಗ್ರಾಮೀಣ ಭಾಗದ ರೈತರ ಹಾಗೂ ಕೂಲಿಗಾರರ ಮಕ್ಕಳ ವಾರ್ಷಿಕ ಪರೀಕ್ಷೆಯ ಸಿದ್ದತೆಗೆ ಪವರ್ ಕಟ್ ನೀತಿಯಿಂದಾಗಿ ಅವರಿಗೆ ತೊಂದರೆಯಾಗಿದೆ ಎಂಬುದಕ್ಕೆ ಕೂಡ ಅವರಿಂದ ಉತ್ತರ ಬಂದಿಲ್ಲ. ಈಗಾಗಲೇ ವಾರ್ಷಿಕ ಪರೀಕ್ಷೆಗಳು ಬರುತ್ತಿದೆ. ವಿದ್ಯುತ್ ಕೊರತೆಯಿಂದಾಗಿ ಮಕ್ಕಳು ವ್ಯಾಸಂಗವನ್ನು ಮಾಡದೇ ಇರುವ ಪರಿಸ್ಥಿತಿ ನಿರ್ಮಾಣವಾಗಿ ಪೋಷಕರು ಜನಪ್ರತಿನಿಧಿಗಳ ಮೇಲೆ ಒತ್ತಡ ತರುತ್ತಿದ್ದಾರೆ ಅದರ ಬಗ್ಗೆ ಉತ್ತರವನ್ನು ನೀಡಿಲ್ಲ. ವಿದ್ಯುತ್ ಪ್ರಸರಣ ನಿಗಮವು ಖಾಸಗೀಕರಣಗೊಂಡ ನಂತರ ಕಾಲಾವಧಿಯಲ್ಲಿ ರಾಜ್ಯ ಸರ್ಕಾರಕ್ಕೆ ಉಳಿತಾಯವಾದ ವಾರ್ಷಿಕವಾರು ನಷ್ಟ ಎಷ್ಟು ಎಂಬ ಪ್ರಶ್ನೆಗೆ, ಆಯಾಯ ಸಬ್ ಸ್ಟೇಷನ್‌ಗಳು

ನಿಗದಿಪಡಿಸಲಾಗಿರುವ ವಿದ್ಯುತ್‌ನ ಹಂಚಿಕೆಗೆ ಸೀಮಿತಗೊಳಿಸಬೇಕಾಗಿರುತ್ತದೆ, ಕೆಲವು ಸಬ್ ಸ್ಟೇಷನ್‌ಗಳನ್ನು ಬಿಟ್ಟು ಉಳಿದಂತೆ ವ್ಯವಸ್ಥೆಯು ಚೆನ್ನಾಗಿ ನಿರ್ವಹಣೆ ಮಾಡುತ್ತಿರುವುದು ಅನುಬಂಧಕ್ಕೆ ಬಂದಿರುತ್ತದೆ. ಕೆಲವು ಸಬ್ ಸ್ಟೇಷನ್‌ಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಫೀಡರ್‌ಗಳ ಮೇಲೆ ಓವರ್ ಲೋಡ್ ಆಗುವಿಕೆ ಇತ್ಯಾದಿ ಕಾರಣಗಳಿಂದಾಗಿ ಮೇಲ್ಕಂಡ ರೀತಿಯಲ್ಲಿ ವಿದ್ಯುತ್‌ನ ಸರಬರಾಜಿನ ವ್ಯವಸ್ಥೆಯನ್ನು ಜಾರಿಗೊಳಿಸಲು ಸಾಧ್ಯವಾಗುತ್ತದೆ. ನಾವು ನಷ್ಟ ಎಷ್ಟು ಕೇಳಿದ್ದೇವೆ, ಯಾವ ಎಂ.ವಿ.ಎಸ್ ಎಸ್ ನಲ್ಲಿ ಎಷ್ಟು ಲೋಡು ತೆಗೆದುಕೊಳ್ಳುತ್ತಿದೆ ಎಂದು ಕೇಳುತ್ತಿಲ್ಲ, ಆಗಿರುವ ನಷ್ಟವೆಷ್ಟು ಎಂದು ಕೇಳುತ್ತಿದ್ದೇವೆ.

ಶ್ರೀ ಬಸವರಾಜ ಹೆಚ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆ ಭಾಗದಲ್ಲಿ ಎಷ್ಟೆಷ್ಟು ಪಂಪ್‌ಸೆಟ್ಟುಗಳಿಗೆ ಅದನ್ಯಾವುದನ್ನೂ ನೋಡಲಾರದೆಯೇ ನಿಗದಿಪಡಿಸಿದ್ದಾರೆ ಎಂದು ಹೇಳಿದ್ದಾರೆ. ಆದರೆ ಉತ್ತರದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಆ ಸ್ಟೇಷನ್‌ನಲ್ಲಿ ಮೊದಲು ಎಷ್ಟು ವಿದ್ಯುತ್ ಸರಬರಾಜು ಆಗುತ್ತಿತ್ತು ಎಂಬುದನ್ನೆಲ್ಲಾ ಲೆಕ್ಕದಲ್ಲಿ ಇಟ್ಟುಕೊಂಡೇ ಈಗ ನಾನೇನು 85 ದಶಲಕ್ಷ ಯೂನಿಟ್ ಏನು ಕೊಟ್ಟಿದ್ದೇವೆ, ಎಲ್ಲೆಲ್ಲಿ ಎಷ್ಟು ಖರ್ಚಾಗಿತ್ತು ಎಂಬುದನ್ನು ಗಮನದಲ್ಲಿ ಇಟ್ಟುಕೊಂಡೇ ಕೊಡಲಾಗಿದೆ. ಎರಡನೆಯದಾಗಿ, ವಿದ್ಯಾರ್ಥಿಗಳಿಗೆ ಅನಾನುಕೂಲ ಆಗುತ್ತಿದೆಯೆಂದು ಹೇಳಿದ್ದಾರೆ. ಈಗಾಗಲೆ ಆರರಿಂದ ಹತ್ತು ಗಂಟೆಯವರೆಗೆ ರೂರಲ್ ಏರಿಯಾದಲ್ಲಿ ಸಿಂಗಲ್ ಫೇಸ್ ವಿದ್ಯುತ್‌ನ್ನು ರಾಜ್ಯದ ಎಲ್ಲಾ ಕಡೆ ಒದಗಿಸಲಾಗುತ್ತಿದೆ. ಆದ್ದರಿಂದ ಹತ್ತು ಗಂಟೆಯವರೆಗೆ ವಿದ್ಯಾರ್ಥಿಗಳಿಗೆ ಅನುಕೂಲ ಆಗುವ ಹಾಗೆ ವಿದ್ಯುತ್‌ನ್ನು ಈಗಾಗಲೇ ಒದಗಿಸುತ್ತಿದ್ದೇವೆ ಕೆಲವು ಭಾಗಗಳಲ್ಲಿ ಆರು ಗಂಟೆ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದಿರಿ ಅಲ್ಲಿ ಅಷ್ಟು ಬರುತ್ತಿಲ್ಲವೆಂದು ಹೇಳಿದ್ದಾರೆ. ಅದಕ್ಕೇ ಉತ್ತರವಾಗಿ ಕೆಲವು ಫೀಡರ್‌ಗಳು ಎಷ್ಟು ಅಶ್ವಶಕ್ತಿ ಇರಬೇಕೋ ಅಷ್ಟು ಶಕ್ತಿ ಇದ್ದಂಥ ಟ್ರಾನ್ಸ್‌ಫಾರ್ಮರ್‌ಗಳ ಕೊರತೆ ನಮ್ಮಲ್ಲಿ ಇರುವ ಕಾರಣ ಕೆಲವು ಕಡೆ ಸತತವಾಗಿ ವಿದ್ಯುತ್ ಕೊಡಲು ಸಾಧ್ಯವಾಗುತ್ತಿಲ್ಲವೆಂದು ಸ್ಪಷ್ಟವಾದ ಉತ್ತರವನ್ನು ಮಾನ್ಯ ಸದಸ್ಯರಿಗೆ ಕೊಡಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶದಲ್ಲಿ ಬಹುಶಃ ಈ ಹಿಂದೆ ಯಾವುದೇ ಸಮಯದಲ್ಲೂ ಈ ಪರಿಸ್ಥಿತಿ ಉಂಟಾಗಿರಲಿಲ್ಲ. ಅಷ್ಟೊಂದು ವಿದ್ಯುತ್‌ನ ಅಭಾವದ ಪರಿಸ್ಥಿತಿ ನಿರ್ಮಾಣವಾಗಿದೆ ಇದರಿಂದ ಎರಡು ತೊಂದರೆಗಳಾಗುತ್ತಿದೆ. ಅಲ್ಲಿಂಥ ಗ್ರಾಮಸ್ಥರಿಗೆ ವಿದ್ಯುತ್ ಸರಬರಾಜಿನ ಮೂಲಕ ಪಂಪ್‌ಸೆಟ್ಟಿನ ಮೂಲಕ ಏನು ಹೊಲಗಳಿಗೆ ನೀರನ್ನು ಬಿಡಬೇಕೋ ಅದು ಮಾಡಲು ಆಗುತ್ತಿಲ್ಲ. ಆದ್ದರಿಂದ ಬರಗಾಲದ ಪರಿಸ್ಥಿತಿ ಇದರ ಜೊತೆಗೆ ವಿದ್ಯುತ್ ಸರಬರಾಜು ಇಲ್ಲದಿರುವುದರಿಂದ ಅವರುಗಳ ಹೊಲಕ್ಕೆ ನೀರಿನ ಸರಬರಾಜಿಲ್ಲ. ಇನ್ನೊಂದು ಬಹಳ ಗಂಭೀರವಾದ ಪರಿಸ್ಥಿತಿ ಎಂದರೆ, ತಾವು ವಿದ್ಯುತ್‌ನ ಸರಬರಾಜನ್ನು ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ ಆರು ಗಂಟೆಯವರೆಗೆ ಮಾಡುತ್ತಿದ್ದೀರಿ. ಕೆಲವು ಕಡೆ ರಾತ್ರಿ ಎರಡು ಗಂಟೆಯಿಂದ ಬೆಳಿಗ್ಗೆ ಎಂಟು ಗಂಟೆಯವರೆಗೆ ಮಾಡುತ್ತಿದ್ದೀರಿ. ಈ ರೀತಿಯಾದಂಥ ಕ್ರಮ ಸರಿಯಲ್ಲ. ರಾತ್ರಿ ಯಾವ ಗ್ರಾಮಸ್ಥರು ನಿದ್ರೆ ಮಾಡಬಾದೇ ಹೇಗೆ? ರಾತ್ರಿ ಹೊಲಕ್ಕೆ ಹೋಗಬೇಕು ಎನ್ನುವಂಥದ್ದು. ಇದರ ಬಗ್ಗೆ ವಿಚಾರ ಮಾಡಬೇಕು. ರಾತ್ರಿ ಹೊತ್ತು ಶ್ರೀ ಪೇಸ್ ಏನು ಮಾಡುತ್ತಿದ್ದೀರಲ್ಲಾ ಅದನ್ನು ಬೆಳಗಿನ ಜಾವ ಆರು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ಬೇಕಾದಂತೆ ಮಾಡಿ. ಆದರೆ ರಾತ್ರಿ ಹತ್ತು

ಗಂಟೆಯ ನಂತರ ಬೆಳಿಗ್ಗೆ ಆರುಗಂಟೆಯವರೆಗೆ ಮಾಡುವುದನ್ನು ಮಾಡಬಾರದು. ವಿದ್ಯುತ್‌ನ ಭಾವದಿಂದ ಗ್ರಾಮೀಣ ಭಾಗದ ಕುಡಿಯುವ ನೀರಿನ ಯೋಜನೆಗಳೆಲ್ಲಾ ಕೊಲ್ಯಾಪ್ಸ್ ಆಗಿ ಕುಡಿಯುವ ನೀರಿಗೆ ತೊಂದರೆಯಾಗಿದೆ, ಕೃತಕವಾದಂಥ ನೀರಿನ ಅಭಾವ ಗ್ರಾಮೀಣ ಪ್ರದೇಶದಲ್ಲಿ ಆಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣ ವಂದಾನಾ ನಿರ್ಣಯ ಮೇಲಿನ ಚರ್ಚೆಯ ಸಮಯದಲ್ಲಿ 12 ಗಂಟೆಗಳ ಕಾಲ ಸತತವಾಗಿ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದರು. ಅಂದರೆ ತ್ರೀ ಫೇಸಿಸ್ ಅನಂತರ 12 ಗಂಟೆಗಳ ಕಾಲ ಕೊಡಲು ಆಗುವುದಿಲ್ಲ ಸತತವಾಗಿ ಎಂಟು ಗಂಟೆಗಳ ಕಾಲ ಕೊಡುತ್ತೇವೆಂದು ಹೇಳಿದ್ದರು.

12.00 ಪಿ.ಎಂ.

ಅವೆರಡೂ ಪ್ರಾಮಿಸ್ ಅನ್ನು ನಿಮಗೆ ಮಾಡಲಿಕ್ಕೆ ಆಗಲಿಲ್ಲ. ಅದು ಏಕೆ ಆಗಲಿಲ್ಲ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕಾಗುತ್ತದೆ. ತಾವು ಹೇಳಿರುವಂತೆ ಗ್ರಾಮೀಣ ಪ್ರದೇಶಗಳಲ್ಲಿ ಆರೂವರೆ ತಾಸುಗಳ ಕಾಲ ಕರೆಂಟ್ ಕೊಡುತ್ತಿಲ್ಲ. ನಾನು ಎಷ್ಟೋ ಗ್ರಾಮೀಣ ಪ್ರದೇಶಗಳಿಗೆ ಹೋಗಿ ಟೂರ್ ಮಾಡಿದ್ದೇನೆ. ಕೇವಲ 3-4 ಗಂಟೆಗಳಷ್ಟು ಕಾಲ ಮಾತ್ರ ತ್ರೀಫೇಸ್‌ನಲ್ಲಿ ಕರೆಂಟ್ ಸಿಗುತ್ತಿದೆ. ಇದರಿಂದ ಏನೂ ಪ್ರಯೋಜನ ಇಲ್ಲ. ಗ್ರಾಮೀಣ ಭಾಗದಲ್ಲಿ ಜನರು ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅವರ ಬವಣೆಯ ಶಾಪ ನಿಮಗೆ ತಟ್ಟುತ್ತದೆ. ಆದ್ದರಿಂದ ತಕ್ಷಣವೇ ಇದರ ಬಗ್ಗೆ ಸುಧಾರಣೆ ಕ್ರಮವನ್ನು ಕೈಗೊಳ್ಳಬೇಕು ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲ ಮಾಡುವಂತಹ ವ್ಯವಸ್ಥೆಯಾಗಬೇಕು ಎನ್ನುವಂತಹ ಒತ್ತಾಯವನ್ನು ನಾನು ಇವತ್ತು ಮಾಡುತ್ತಿದ್ದೇನೆ.

Mr. Speaker:- This is ageneral nature of question. ಎಲ್ಲರೂ ಉಪ ಪ್ರಶ್ನೆಗಳನ್ನು ಕೇಳಿಬಿಡಿ. ನಂತರ ಒಟ್ಟಾರೆಯಾಗಿ ಎಲ್ಲದಕ್ಕೂ ಸೇರಿಸಿ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಸಿ. ಚೆನ್ನಿಗಪ್ಪ:- ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿಯ ಸರಬರಾಜಿನ ಬಗ್ಗೆ ಮಾನ್ಯ ಸದಸ್ಯರಾದ ಕೃಷ್ಣಮೂರ್ತಿಯವರು ಸರ್ಕಾರಕ್ಕೆ ಉತ್ತಮವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಒಂದನ್ನು ವಿನಂತಿ ಮಾಡಿಕೊಳ್ಳಬಯಸುತ್ತೇನೆ. ನಾವೆಲ್ಲರೂ ಹಳ್ಳಿಯಿಂದ ಬಂದಂತಹವರಾಗಿದ್ದೇವೆ. ಇಲ್ಲಿರುವ ಬಹುತೇಕ ಶಾಸಕರೆಲ್ಲರೂ ಜಮೀನು ಮತ್ತು ತೋಟಗಳನ್ನು ಮಾಡಿಕೊಂಡಿರುವವರಾಗಿದ್ದೇವೆ. ಸರ್ಕಾರದಲ್ಲಿ ನಾನು ಒಂದೇ ಒಂದು ಮಾತನ್ನು ವಿನಂತಿ ಮಾಡಿಕೊಳ್ಳಲಿಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು 8 ರಿಂದ 10 ತಾಸುಗಳ ವಿದ್ಯುತ್ ಅನ್ನು ಸರಬರಾಜು ಮಾಡುತ್ತೇವೆ ಎಂದು ಹೇಳಿದ್ದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಕಾಲದಲ್ಲಿ ಮಳೆ ಚೆನ್ನಾಗಿ ಬಿದ್ದಿತ್ತು. ಜಲಾಶಯಗಳಲ್ಲಿ ನೀರಿತ್ತು. ಈಗ ಮಳೆ ಇಲ್ಲದ ಕಾರಣ ವಿದ್ಯುಚ್ಛಕ್ತಿ ಸರಬರಾಜಿನ ಅವಧಿಯನ್ನು ಆರೂವರೆ ಗಂಟೆಗಳಿಗೆ ಇಳಿಸಲಾಗಿದೆ. ಅದು ನ್ಯಾಚುರಲ್, ಅದರಲ್ಲಿ ಏನೂ ಆಕ್ಷೇಪಣೆ ಇಲ್ಲ, ಅವರು ಮಾಡಿರುವುದು ಸರಿಯಾಗಿದೆ. ಆರೂವರೆ ಗಂಟೆಗಳ ವಿದ್ಯುಚ್ಛಕ್ತಿ ಸರಬರಾಜನ್ನು ಈಗೇನು ಮಾಡುತ್ತಿದ್ದಾರೋ, ಅದನ್ನು ಹಗಲಿಗೆ ಬದಲಾಗಿ ರಾತ್ರಿ ಹೊತ್ತಿನಲ್ಲಿ ಸರಬರಾಜು ಮಾಡುವಂತಹ ವ್ಯವಸ್ಥೆಯಾಗಬೇಕು. ಯಾವ್ಯಾವ ಏರಿಯಾಗಳಿಗೆ ಎಷ್ಟು ಗಂಟೆಗಳಿಂದ ಎಷ್ಟು ಗಂಟೆಗಳವರೆಗೆ ವಿದ್ಯುತ್ ಸರಬರಾಜು ಮಾಡಲಾಗುವುದು ಎಂಬ ಬಗ್ಗೆ ಆಯಾ ತಾಲ್ಲೂಕುಗಳಲ್ಲಿ ಪ್ರಕಟಣೆ ಮಾಡುವುದು ಒಳ್ಳೆಯದು. ಈಗ ಯಾವಾಗ ಕರೆಂಟ್

ಬರುತ್ತದೆ ಮತ್ತು ಯಾವಾಗ ಹೋಗುತ್ತದೆ ಎಂಬುದೇ ಗೊತ್ತಾಗುತ್ತಿಲ್ಲ. ಒಂದೊಂದು ದಿವಸ ಒಂದೊಂದು ಸಮಯದಲ್ಲಿ ವಿದ್ಯುತ್ ಸರಬರಾಜು ಇರುತ್ತದೆ. ಇದು ಮಾನ್ಯ ಅಧ್ಯಕ್ಷರಿಗೂ ಗೊತ್ತಿದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸಿ, ರಾಜ್ಯದ ಜನತೆಗೆ ಎಷ್ಟು ಗಂಟೆಗಳ ಕಾಲವಾದರೂ ವಿದ್ಯುತ್ ಸರಬರಾಜು ಮಾಡಲಿ, ಆದರೆ ಅದನ್ನು ನಿಗದಿತ ಅವಧಿಯಲ್ಲಿ ಸರಬರಾಜು ಮಾಡಲಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಕುಡಿಯುವ ನೀರಿನ ವಿಚಾರದಲ್ಲಿ ಹೇಳುವುದಾದರೆ, ಇಂದು ಎರಡು ಸಾವಿರ ಜನಸಂಖ್ಯೆಗೆ ಒಂದು ಓವರ್ ಹೆಡ್ ಟ್ಯಾಂಕ್ ಅಥವಾ ಮಿನಿ ವಾಟರ್ ಸ್ಕೀಮ್ ಇದೆ. ಅಲ್ಲಿ ಕೇವಲ 2-3 ಗಂಟೆಗಳ ಕಾಲ ಮಾತ್ರ ವಿದ್ಯುತ್ ಕೊಟ್ಟರೆ ನೀರು ಸರಬರಾಜು ಮಾಡುವುದಕ್ಕಾಗುವುದಿಲ್ಲ. ಹೀಗಾಗಿ ಅಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಜನಸಂಖ್ಯೆಗನುಗುಣವಾಗಿ ಏರಿಯಾಗಳನ್ನು ಗುರುತಿಸಿ..

ಅಧ್ಯಕ್ಷರು :- ಉಪ ಪ್ರಶ್ನೆ ಕೇಳಿ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡಿ, ಈಗ ಬೇಡಿ.

ಶ್ರೀ ಸಿ. ಚೆನ್ನಿಗಪ್ಪ :- ವಿದ್ಯುತ್ ಸರಬರಾಜು ಮಾಡುವ ಅವಧಿಯನ್ನು ದಯವಿಟ್ಟು ನಿಗದಿಪಡಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸ ಗೌಡ (ಕುರುವನಹಳ್ಳಿ):- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವಂತಹ ಉತ್ತರ ನಿಜವಾಗಿಯೂ ಕೂಡ ಸಮರ್ಪಕವಾದುದಲ್ಲ. ಎಂಟೂವರೆ ಗಂಟೆಗಳ ಕಾಲ ಸಿಂಗಲ್ ಫೇಸ್ ಕರೆಂಟ್ ಕೊಡುತ್ತಿದ್ದೇವೆ ಎಂದು ಸರ್ಕಾರ ಹೇಳುವುದು ಸುಳ್ಳು. ಆರೂವರೆ ಗಂಟೆಗಳ ಕಾಲ ತ್ರೀಫೇಸ್ ಕರೆಂಟ್ ಅನ್ನು ಕೊಡುತ್ತಿದ್ದೇವೆ ಎಂದು ಹೇಳುತ್ತಿರುವುದೂ ಕೂಡ ಅಪ್ಪಟ ಸುಳ್ಳು. ಕೋಲಾರ ಜಿಲ್ಲೆಯವರಾದ ನಾವು ಕುಡಿಯುವ ನೀರಿಗೂ ಕೂಡ ಬೋರ್‌ವೆಲ್ ಅನ್ನೇ ಅವಲಂಬಿಸಿದ್ದೇವೆ. ಮಾನ್ಯ ಸಚಿವರು ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. ಬೇಕಾದರೆ ಅವರು ನನ್ನ ತೋಟಕ್ಕೆ ಬಂದರೆ ನಾನು ಅಲ್ಲಿ ಎಷ್ಟು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡುತ್ತಿದ್ದಾರೆಂದು ಅವರಿಗೆ ತೋರಿಸುತ್ತೇನೆ. ಮಾನ್ಯ ಸಚಿವರು ಹೇಳಿದ್ದು ನಿಜವಾದರೆ ನಾನು ರಾಜೀನಾಮೆ ಕೊಡುತ್ತೇನೆ, ಇಲ್ಲದಿದ್ದರೆ ಅವರು ರಾಜೀನಾಮೆ ಕೊಡುತ್ತಾರಾ? ಈ ಸದನಕ್ಕೆ ಮಾನ್ಯ ಸಚಿವರು ಸುಳ್ಳು ಮಾಹಿತಿಯನ್ನೇಕೆ ಕೊಡುತ್ತಾರೆ? ಇದನ್ನು ನೀವು ಸರಿಯಾದಂತಹ ದಾಖಲೆಗಳ ಸಮೇತ ಕೊಡಿ. ಇಲ್ಲ. ಬನ್ನಿ, ನನ್ನ ತೋಟದಲ್ಲಿ ತೋರಿಸುತ್ತೇನೆ, ನೀವು ಎಂಟೂವರೆ ಮತ್ತು ಆರೂವರೆ ಗಂಟೆಗಳು ಸೇರಿ ಒಟ್ಟು 15 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡುತ್ತಿದ್ದಲ್ಲಿ ನಾನು ಎಂ.ಎಲ್.ಎ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ತಾವು ಮಾನ್ಯ ಸಚಿವರು ಹೇಳಿದ್ದು ಸರಿ ಎಂದು ಹೇಳಿಬಿಟ್ಟರೆ ಸಾಕು, ನಾವೆಲ್ಲರೂ ರಾಜೀನಾಮೆ ಕೊಡೋಣ ಬಿಡಿ.

ಶ್ರೀ ಕೆ. ಶ್ರೀನಿವಾಸ ಗೌಡ (ಕುರುವನಹಳ್ಳಿ) :-ಮಾನ್ಯ ಅಧ್ಯಕ್ಷರದೂ ಕೂಡ ತೋಟ ಇದೆ. ಅವರೂ ಕೂಡ ಹೇಳಲಿ ಹಳ್ಳಿಗಳಲ್ಲಿ ಕರೆಂಟ್ ಇಲ್ಲದೇ ಕುಡಿಯುವ ನೀರೂ ಕೂಡ ಸರಬರಾಜು ಆಗದೇ ಜನ ಬಹಳ ಕಷ್ಟ ಪಡುತ್ತಿದ್ದಾರೆ. ಇದು ನಿಮಗೂ ಕೂಡ ಗೊತ್ತಿದೆ. ಈ ಪರಿಸ್ಥಿತಿಯಲ್ಲಿ ಮಾನ್ಯ ಸಚಿವರು ಈ ರೀತಿಯ ಸತ್ಯಕ್ಕೆ ದೂರವಾದ ಮಾಹಿತಿಯನ್ನು ಸದನಕ್ಕೆ ಕೊಡುತ್ತಿದ್ದಾರೆಂದರೆ, ಅದಕ್ಕೆ ನಾನು ಇನ್ನೇನು ಹೇಳಲಿ.

ಅಧ್ಯಕ್ಷರು :- ಮಾನ್ಯ ಶ್ರೀನಿವಾಸಗೌಡರೇ, 'ಸುಳ್ಳು' ಎಂದು ಹೇಳಬೇಡಿ. 'ಸತ್ಯಕ್ಕೆ ದೂರವಾದುದು' ಎಂದು ಹೇಳಿ.

ಶ್ರೀ ಕೆ. ಶ್ರೀನಿವಾಸ ಗೌಡ (ಕುರುವನಹಳ್ಳಿ) :- ಆಯಿತು. 'ಸತ್ಯಕ್ಕೆ ದೂರವಾದುದು' ಎಂದೇ ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:- 'ಅಳಿಯ' ಅಲ್ಲ 'ಮಗಳ ಗಂಡ' ಎರಡೂ ಒಂದೇ ಆಗುತ್ತದೆ ಸುಳ್ಳು ಎಂದರೆ ಏನಾಗುತ್ತದೆ?

ಶ್ರೀ ಕೆ. ಶ್ರೀನಿವಾಸ ಗೌಡ (ಕುರುವನಹಳ್ಳಿ) :-ಮಾನ್ಯ ಅಧ್ಯಕ್ಷರೇ, ನನ್ನ ತೆಂಗಿನ ತೋಟದಲ್ಲಿ ಮೊದಲೇ ನುಸಿ ಬಂದಿತ್ತು ಈಗ ನೀರು ಕೊಡದೇ ಆ ನುಸಿ ಈಗಾಗಲೇ ತೋಟದಲ್ಲಿ ಅಳವಾಗಿ ಬಿಟ್ಟಿದೆ. ನನ್ನ ಪರಿಸ್ಥಿತಿಯೇ ಈ ರೀತಿ ಆಗಿದ್ದರೆ, ಇನ್ನು ಬೇರೆಯವರ ಪರಿಸ್ಥಿತಿಯೇನು? ಅಧಿಕಾರಿಗಳು ಕೊಟ್ಟಿರುವಂತಹ 'ಸತ್ಯಕ್ಕೆ ದೂರವಾದಂತಹ ಮಾಹಿತಿಯನ್ನು ಮಾನ್ಯ ಸಚಿವರು ಸದನಕ್ಕೆ ಕೊಟ್ಟಿದ್ದಾರೆ. ಎರಡನೆಯದಾಗಿ,....

ಅಧ್ಯಕ್ಷರು:- ಒಬ್ಬೊಬ್ಬರು 2-3 ಉಪ ಪ್ರಶ್ನೆಗಳನ್ನು ಕೇಳಿದರೆ ಹೇಗೆ?

ಶ್ರೀ ಕೆ. ಶ್ರೀನಿವಾಸ ಗೌಡ (ಕುರುವನಹಳ್ಳಿ) :-ಮಾನ್ಯ ಅಧ್ಯಕ್ಷರೇ, ನೀವೂ ಕೂಡ ಕೋಲಾರದವರಾಗಿ ಅಲ್ಲಿನ ಪರಿಸ್ಥಿತಿ ಬಗ್ಗೆ ಕೇಳುವುದಕ್ಕೆ ನೀವು ಅವಕಾಶ ಮಾಡಿಕೊಡದಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು :- ನಾನು ಕೋಲಾರದವನೇ ಇರಬಹುದು ಆದರೆ I cannot discriminate. I belonged to entire State, not only to Kolar..

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೋಲಾರದವರಾಗಿದ್ದಾರೆಂದು ತಾವು ಅವರಿಗೆ ಪ್ರಶ್ನೆ ಕೇಳುವುದಕ್ಕೆ ಬದಲಾಗಿ ಭಾಷಣ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದೇ?

ಅಧ್ಯಕ್ಷರು :- ಆ ತರಹ ಏನೂ ಇಲ್ಲ. ಮಾನ್ಯ ಶ್ರೀನಿವಾಸಗೌಡರೇ, ತಾವು ದಯವಿಟ್ಟು ಪ್ರಶ್ನೆ ಕೇಳಿ.

ಶ್ರೀ ಕೆ. ಶ್ರೀನಿವಾಸಗೌಡ (ಕುರುವನಹಳ್ಳಿ) :- ಮಾನ್ಯ ಅಧ್ಯಕ್ಷರೇ, ಅದನ್ನೇ ನಾನು ಈಗ ಕೇಳುತ್ತಿದ್ದೇನೆ. 100 ಕೆ.ವಿ. ಯಾಗಲೀ ಅಥವಾ 63 ಕೆ.ವಿಯಾಗಲೀ ಕೋಲಾರದಲ್ಲಿ ಟಿ.ಸಿ.ಗಳಿಗೆ ಆಯಿಲ್ ಇಲ್ಲ. ಒಂದು ಸಾರಿ ಟಿ.ಸಿ ಕೊಟ್ಟರೆ, ಅದು 8-10 ದಿನಗಳಲ್ಲಿ ಸುಟ್ಟು ಹೋದರೆ, ಅದಕ್ಕೆ ಆಯಿಲ್ಲೇ ಇಲ್ಲ. ನಾನು ಆ ಬಗ್ಗೆ ಸಂಬಂಧಪಟ್ಟಂತಹ ಮ್ಯಾನೇಜಿಂಗ್ ಡೈರೆಕ್ಟರ್‌ರವರೊಂದಿಗೆ ಮಾತನಾಡಿದ್ದೇನೆ. ನಮ್ಮಲ್ಲಿ ಆಯಿಲ್ ಇಲ್ಲ. ಯಾವುದೋ ಮೂರೇ ಮೂರು ಕಂಪನಿ ಈ ದೇಶದಲ್ಲಿರುವುದು, ನಾವು ಅವರಿಗೆ ಇಂಡೆಂಟ್ ಹಾಕಿದ್ದೇವೆ, ಅಲ್ಲಿಂದ ಬರುವವರೆಗೂ ಆಯಿಲ್ ಕೊಡುವುದಕ್ಕಾಗುವುದಿಲ್ಲ ಎಂದು ಅವರು ನನ್ನೊಡನೆ ಹೇಳಿದ್ದಾರೆ. ಅಲ್ಲಿನ ರೈತರ ಗತಿಯೇನು? ನಾವೆಲ್ಲಾ ಆಲೂಗೆಡ್ಡೆ ಟೊಮೋಟೋನಂತಹ ಬೆಳೆ ಬೆಳೆಯುವವರಾಗಿದ್ದೇವೆ, ಒಂದು ವಾರ ನೀವು ಅದಕ್ಕೆ ನೀರು ಕೊಡದಿದ್ದರೆ ಅವುಗಳ ಗತಿಯೇನು? ಈ ಪರಿಸ್ಥಿತಿಯಾದರೆ ಎಷ್ಟು ಕಷ್ಟವಾಗುತ್ತದೆ. ನೀವು ಇನ್ನೊಂದು.

ಅಧ್ಯಕ್ಷರು:- ಮಾನ್ಯ ಶ್ರೀನಿವಾಸಗೌಡರೇ, shall I take it as a suomoto half an hour question? ನಮಗೆ ಪ್ರಶ್ನೋತ್ತರದ ಟೈಮ್ ಮುಗಿಯುತ್ತಿದೆ. ನಾನು ಇದನ್ನು

Sumoto ಅರ್ಧ ಗಂಟೆ ಚರ್ಚೆ ತೆಗೆದುಕೊಳ್ಳುತ್ತೇನೆ. ಆಗ ನೀವು ಎಷ್ಟಾದರೂ ಮಾತನಾಡಿ. ಮಾನ್ಯ ಬಸವರಾಜ್ ಪಾಟೀಲ್‌ರವರೇ, ಆಯಿಲ್ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿರುವುದು ಕರೆಕ್ಟ್ ಎಲ್ಲಿ ಕೇಳಿದರೂ ಟ್ರಾನ್ಸ್‌ಫಾರ್ಮರ್‌ಗೆ ಆಯಿಲ್ ಇಲ್ಲವೆಂದು ಹೇಳುತ್ತಾರೆ. ಇದಕ್ಕೆ ಬೇಗನೇ ನೀವು ಏನಾದರೂ ವ್ಯವಸ್ಥೆ ಮಾಡಿ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) :- ಟಿ.ಸಿ. ಸುಟ್ಟು ಹೋದರೆ, ರೈತನಿಗೆ...

(ಗೊಂದಲ)

ಅಧ್ಯಕ್ಷರು:- 31ನೇ ತಾರೀಖಿನೊಳಗಾಗಿ ಇದನ್ನು ಅರ್ಧ ಗಂಟೆ ಪ್ರಶ್ನೆಯನ್ನಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ. ಅರ್ಧ ಗಂಟೆ ಚರ್ಚೆಗೆ ನಾನೇ ಆಲೋ ಮಾಡುತ್ತೇನೆ ಎಂದು ಹೇಳಿದ ಮೇಲೂ ನಿಮ್ಮಾಕೆ ಅದರ ಬಗ್ಗೆ ಈಗಲೇ ಚರ್ಚೆ ಮಾಡುತ್ತೀರಿ? ದಯವಿಟ್ಟು ಎಲ್ಲಾ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಸಚಿವರೇ, ಇದಕ್ಕೆ ಈಗ ಎಷ್ಟು ಸಾಧ್ಯವೋ ಅಷ್ಟಕ್ಕೆ ಉತ್ತರ ಹೇಳಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ (ಕುರುವನಹಳ್ಳಿ) :- ಅರ್ಧ ಹಣವನ್ನು ರೈತರು ಕೊಡಬೇಕೆಂದು ಕೇಳುತ್ತಿದ್ದಾರೆ. ನೀವು ಆ ಬಗ್ಗೆ ಆದೇಶವನ್ನೇನಾದರೂ ಹೊರಡಿಸಿದ್ದೀರಾ?

(ಗೊಂದಲ)

ಅಧ್ಯಕ್ಷರು:- ನಾನು ಅರ್ಧ ಗಂಟೆ ಚರ್ಚೆಗೆ ಆಲೋ ಮಾಡಿದ್ದೇನೆ ಎಂದರೂ ಸಹ ನೀವುಗಳು ಏಕೆ ಈಗಲೇ ಚರ್ಚೆ ಮಾಡುತ್ತಿದ್ದೀರಿ? ಮಾನ್ಯ ಸಚಿವರು ಈಗ ಸಂಕ್ಷಿಪ್ತವಾಗಿ ಉತ್ತರ ಹೇಳಲಿ. ಅರ್ಧ ಗಂಟೆ ಚರ್ಚೆಯಾದಾಗ ಪೂರ್ಣವಾಗಿ ಹೇಳಲಿ.

(ಗೊಂದಲ)

ಶ್ರೀ ಬಸವರಾಜ್ ಹೆಚ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ರಾತ್ರಿಯ ಸಮಯದಲ್ಲಿ ತಾವು ಪವರ್ ಕೊಡುತ್ತಿದ್ದೀರಿ. ಅದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಹಗಲು ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಿದರೆ ಒಳ್ಳೆಯದು ಎಂಬ ಸಲಹೆಯನ್ನು ಅವರು ಕೊಟ್ಟಿದ್ದಾರೆ. ನಾವು ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿ ಮೀಟಿಂಗ್ ಮಾಡಿದ್ದೇವೆ. ಉದಾಹರಣೆಗೆ ಹೇಳಬೇಕೆಂದರೆ, ಕೋಲಾರ ಜಿಲ್ಲೆ ವಿಷಯ ಬಂದಾಗ, ಮಾನ್ಯ ಶ್ರೀನಿವಾಸಗೌಡರವರು ಬಹುತೇಕ ಆ ಮೀಟಿಂಗ್‌ನಲ್ಲಿ ಇದ್ದಿರಬೇಕು, ಮೀಟಿಂಗ್‌ನಲ್ಲಿ ಆ ಜಿಲ್ಲೆಯವರು ನಮಗೆ ರಾತ್ರಿ ಸಮಯದಲ್ಲಿ ವಿದ್ಯುತ್ ಕೊಟ್ಟರೂ ಪರವಾಗಿಲ್ಲ, ಕನಿಷ್ಟ ಎಂಟು ತಾಸು ಪವರ್ ನಮಗೆ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಸ್ವಇಚ್ಛೆಯಿಂದ ಹೇಳಿದರು. ಕೋಲಾರ ಜಿಲ್ಲೆಯಲ್ಲಿ ರಾತ್ರಿ 2 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಪವರ್ ಕೊಡಲು ಹೇಳಿದ್ದೇವೆ. ರಾಜ್ಯದ ಇನ್ನುಳಿದ ಭಾಗದಲ್ಲಿ ಎಲ್ಲೆಲ್ಲಿ ನಮಗೆ ಹಗಲು ಹೊತ್ತಿನಲ್ಲಿ ವಿದ್ಯುತ್ ಸರಬರಾಜು ಬೇಕು ಎಂದು ಕೇಳಿದ್ದಾರೋ, ಅಂತಹ ಕಡೆಗಳಲ್ಲಿ ಬೇರೆ ಬೇರೆ ಕಂಪನಿಗಳಿಗೆ ಆದೇಶ ಕೊಟ್ಟು ಅಂತಹ ಕಡೆಗಳಲ್ಲಿ ಹಗಲು ಹೊತ್ತಿನಲ್ಲಿ ಆರು ಗಂಟೆ ತ್ರಿಫೇಸ್ ಕರೆಂಟ್ ಕೊಡಲಿಕ್ಕೆ ಹೇಳಿದ್ದೇವೆ. ಆದರೆ ತಾವು ಹೇಳುವ ಪ್ರಕಾರ ಕೆಲವು ಭಾಗದಲ್ಲಿ ಇದು ಸಾಧ್ಯವಾಗುತ್ತಿಲ್ಲ

ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಕೆಲವು ಕಡೆ ಆರು ಗಂಟೆಗಳ ಕಾಲ ಮೂರು ಫೇಸ್ ಕರೆಂಟ್ ಕೊಡಲಿಕ್ಕೆ ಆಗಿಲ್ಲ, ಕೆಲವು ಪತ್ರಿಕೆಗಳಲ್ಲಿ ಈ ಬಗ್ಗೆ ವರದಿಯಾಗಿದೆ. ಟ್ರಾನ್ಸ್‌ಫಾರ್ಮರ್ ಶಕ್ತಿ ಕಡಿಮೆ ಇದ್ದ ಕಾರಣ ಸರಿಯಾದ ರೀತಿಯಲ್ಲಿ ಪವರ್ ಅನ್ನು ಆ ಭಾಗದಲ್ಲಿ ಆರು ತಾಸು ಸಪ್ಲೈ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಹಂತ ಹಂತವಾಗಿ ಅದನ್ನು ಸುಧಾರಣೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇಷ್ಟೇ, ಈಗಲೇ ಪೂರ್ತಿ ರಾಜ್ಯದಲ್ಲಿ ಇಷ್ಟಕ್ಕಂಥ ತೊಂದರೆಗಳನ್ನು ನಾವು ಸರಿಪಡಿಸುತ್ತೇವೆ, ನಾವು ಆರು ತಾಸು ಸಂಪೂರ್ಣ ಪವರ್ ಅನ್ನು ತೊಂದರೆ ಇದ್ದುತಹ ಭಾಗಕ್ಕೆ ಸಪ್ಲೈ ಮಾಡುತ್ತೇವೆ ಎಂದು ಹೇಳುವುದಕ್ಕೆ ನಮಗೆ ಕಷ್ಟವಾಗುತ್ತದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರೆಲ್ಲರಿಗೆ ಗೊತ್ತಿರುವಂತೆ ನಮ್ಮ ಕರ್ನಾಟಕ ರಾಜ್ಯದಲ್ಲಿ ತಯಾರಾಗುವ ವಿದ್ಯುತ್‌ನಲ್ಲಿ ಶೇಕಡ 60 ಭಾಗ ಜಲ ವಿದ್ಯುತ್‌ನಿಂದ ಬರುತ್ತದೆ. ಎರಡು ವರ್ಷ ಸತತವಾಗಿ ಮಳೆ ಇಲ್ಲದ ಕಾರಣ ಜಲ ವಿದ್ಯುತ್ ಸರಿಯಾಗಿ ಉತ್ಪಾದನೆಯಾಗುತ್ತಿಲ್ಲ. ಒಂದು ಕಡೆ ಬರ ಇದೆ ಎಂದು ನಾವು ನೀವು ಹೇಳುತ್ತಿದ್ದೇವೆ. ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಸುಮಾರು 85-89 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ನಾವು ರಾಜ್ಯದ ಎಲ್ಲಾ ಭಾಗಕ್ಕೆ ಸಪ್ಲೈ ಮಾಡುತ್ತಿದ್ದೇವೆ. ಈಗಾಗಲೇ ಪಟ್ಟಣ ಪ್ರದೇಶಕ್ಕೆ ಕೂಡ 24 ತಾಸು ವಿದ್ಯುತ್ ಸರಬರಾಜು ಮಾಡಬಾರದು ಎಂದು ತೀರ್ಮಾನ ಮಾಡಿದ್ದೇವೆ. ಬೆಂಗಳೂರು ಸಿಟಿ ಬಿಟ್ಟು ಉಳಿದ ಪಟ್ಟಣಗಳಲ್ಲಿ ಕೂಡ ದಿನಕ್ಕೆ 2 ತಾಸು ನಾವು ಲೋಡ್ ಶೆಡ್ಡಿಂಗ್ ಮಾಡಿ, ಹಳ್ಳಿಯಲ್ಲಿ ಇರತಕ್ಕಂಥ ರೈತರಿಗೆ ಮತ್ತು ಇನ್ನುಳಿದ ಕಡೆ ಒಳ್ಳೆಯ ಕರೆಂಟ್ ಕೊಡಬೇಕು ಎಂದು ಪ್ರಯತ್ನ ಮಾಡುತ್ತಿದ್ದೇವೆ. ನೀವು ಹೇಳುವ ಸಲಹೆಯನ್ನು...

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸಚಿವರೇ, ರಾತ್ರಿ ಹೊತ್ತು ಕೊಡುತ್ತಿರುವುದೂ ಸಹ 2-3 ತಾಸು ಅಷ್ಟೇ ಇದೆ. ನೀವು ಹೇಳಿಕೊಳ್ಳುತ್ತಿರುವಂತೆ ಇದು ಹದಿನಾರು ಗಂಟೆ ಇಲ್ಲ.

ಶ್ರೀ ಬಸವರಾಜ್ ಹೆಚ್. ಪಾಟೀಲ್:- ನಾವು ಹೇಳುವಂತಹ ಸಲಹೆಗಳೆಲ್ಲವೂ ಒಳ್ಳೆಯದು ಇದೆ. ಆದಷ್ಟು ಶಕ್ತಿ ಮೀರಿ ಇರುವಂತಹ ಪವರ್‌ನಲ್ಲಿ.....

(ಗೊಂದಲ)

Mr. Speaker:- ಸಚಿವರು ಹೇಳುವಂಥಾದ್ದನ್ನು ಮಾತ್ರ ಬರೆದುಕೊಳ್ಳಿ I have not called hon. Member.

Sri Araga Gnendra:- Don't take down Hon' Minister is answering.... sorry n at question ಈಗಾಗಲೇ ಈ ಪ್ರಶ್ನೆಯನ್ನು ಅರ್ಧಗಂಟೆಗಳ ಕಾಲ ತಿಳಿ ಮಾಡಿದ್ದೇನೆ. ಶ್ರೀ ಗಂಡಪ್ಪ ವಕೀಲರೇ ತಮ್ಮ ಪ್ರಶ್ನೆಯನ್ನು ಕೇಳಿ.

(ಶ್ರೀ ಕೆ.ಎಂ. ಕೃಷ್ಣಮೂರ್ತಿ, ಶ್ರೀ ಸಿ. ಚನ್ನಿಗಪ್ಪ, ದೇವರಾಜ್ ಮತ್ತು ಇನ್ನಿತರರು ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿದರು)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ನಾಳೆ, ಈ ಪ್ರಶ್ನೆಯನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅನುಕೂಲ ಮಾಡಿಕೊಡಿ.

ಅಧ್ಯಕ್ಷರು :- ನಾಳೆ ಅರ್ಧ ಗಂಟೆ ಕಾಲಾವಧಿ ಚರ್ಚೆ ಇಲ್ಲದೆ ಇರುವುದರಿಂದ ಗುರುವಾರ ಪ್ರೈಯಾರಿಟಿ ಮೇಲೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್:- ಹಾಗಾದರೆ ಇದನ್ನು ಗುರುವಾರದಂದು ಚರ್ಚೆಗೆ ತೆಗೆದುಕೊಳ್ಳಿ. ಈ ವಿಷಯ ಬಹಳ ಮುಖ್ಯವಾದುದು. ಆದಕಾರಣ ....

ಅಧ್ಯಕ್ಷರು:- ಗುರುವಾರ ಮಾಡೋಣ. ಧರಣಿ ನಿರತ ಸದಸ್ಯರು ಮರಳಿ ತಮ್ಮ ಸ್ಥಾನಗಳಿಗೆ ವಾಪಸ್ಸಾದರು)

ಔರಾದ ತಾಲ್ಲೂಕಿನ ಸಿಂತಾಪೂರ ಗ್ರಾಮದಲ್ಲಿ ವಿದ್ಯುತ್ ಸ್ಥಾವರ ಪ್ರಾರಂಭ

173 (1971) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನ ಸಂತಾಪೂರ ಗ್ರಾಮದಲ್ಲಿ 110 ಕೆ.ವಿ. ಹಾಗೂ ಬಂಡಾ ಗ್ರಾಮದಲ್ಲಿ 33 ಕೆ.ವಿ. ವಿದ್ಯುತ್ ಸ್ಥಾವರಗಳ ಸ್ಥಾಪನೆ ಬಗ್ಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿದ್ಯುತ್ ಸ್ಥಾವರಗಳ ಕೊರತೆಯಿಂದ ಇಡೀ ತಾಲ್ಲೂಕಿನಲ್ಲಿ ವಿದ್ಯುತ್‌ಸರಬರಾಜು ಅಸ್ತವ್ಯಸ್ತವಾಗುತ್ತಿರುವುದು ಸರ್ಕಾರಕ್ಕೆ ತಿಳಿಸಿದೆಯೇ;

ಇ) ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಔರಾದ್ ತಾಲ್ಲೂಕಿನ ಸಂತಾಪೂರದಲ್ಲಿ 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದೇ ತಾಲ್ಲೂಕಿನ ಚೆಂದಾ ಗ್ರಾಮಂದಲ್ಲಿ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ. ಆದರೆ ಖೇರ್ಡಾ - ಬಿ. ಗ್ರಾಮದಲ್ಲಿ ಒಂದು 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನ ಸ್ಥಾಪನೆ ಬಗ್ಗೆ ಪ್ರಸ್ತಾವನೆ ಇರುತ್ತದೆ.

ಆ) ಪ್ರಸ್ತುತ ಔರಾದ್ ತಾಲ್ಲೂಕಿನಲ್ಲಿ ಔರಾದ್ ಕಮಲಾನಗರ ಮತ್ತು ಸಂತಾಪೂರಗಳಲ್ಲಿ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸಂತಾಪೂರದಲ್ಲಿ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನ್ನು ಸ್ಥಾಪಿಸುವ ವಿಷಯದ ಬಗ್ಗೆ ಕಾರ್ಯಪ್ರವೃತ್ತವಾಗಿರುತ್ತದೆ.

ಇ) ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆಗಳು ಈ ತಾಲ್ಲೂಕಿನಲ್ಲಿ ವಿದ್ಯುತ್ ಬೇಡಿಕೆ ಮುಂತಾದ ಅಂಶಗಳನ್ನು ಗಮನಿಸಿ, ಈ ತಾಲ್ಲೂಕಿನ ಸಂತಾಪೂರದಲ್ಲಿ ಒಂದು 1 10 ಎಂ.ವಿ.ಎ. 110:11 ಕೆ.ವಿ. ಮತ್ತು 1.20 ಎಂ.ವಿ.ಎ. 110:33 ಕೆ.ವಿ. ವಿದ್ಯುತ್ ವಿತರಣ ಕೇಂದ್ರದ ಸ್ಥಾಪನೆಗೆ ಅಕ್ಟೋಬರ್ 2002ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಈ ವಿದ್ಯುತ್ ವಿತರಣ ಕೇಂದ್ರದ ಸ್ಥಾಪನೆಗೆ ಅವಶ್ಯವಿರುವ ಭೂಮಿಯನ್ನು ಗುರುತಿಸಲಾಗಿದ್ದು ಭೂ ಸ್ವಾಧೀನದ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಈ ಕಾಮಗಾರಿಯನ್ನು 'ಟರ್ನ್ ಕೀ' ಆಧಾರದಲ್ಲಿ ನಿರ್ವಹಿಸಲು ಗುತ್ತಿಗೆದಾರರನ್ನು ಆದಷ್ಟು ಜಾಗ್ರತೆ ಗೊತ್ತುಪಡಿಸಲಾಗುವುದು. ಈ ಕಾಮಗಾರಿಯ ನಿರ್ವಹಣೆಗೆ ಬೇಕಾಗುವ ಹಣಕಾಸಿನ ವ್ಯವಸ್ಥೆ ಆಗಬೇಕಾಗಿರುತ್ತದೆ. ಹಣಕಾಸಿನ ವ್ಯವಸ್ಥೆ ಆದ ಕೂಡಲೇ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ.